ಅಸಲು ದಾವೆ ನಂಃ 294/2017 ಪಿ.ಡಬ್ಲ್ಯೂಃ3- ವಿರುಪಾಕ್ಷಪ್ಪ ನಾಗಪ್ಪ ಪೋತದಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05-03-2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ VSB ವಕೀಲರಿಂದಃ**

**1.** ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದನ್ನು ವಕೀಲರು ತಯಾರಿ ಮಾಡಿದ್ದಾರೆ. ನನ್ನ ಹೇಳಿಕೆ ಮೇರೆಗೆ ತಯಾರು ಮಾಡಿದ್ದಾರೆ. ನಾನು ದಾವಾ ಆಸ್ತಿ ಚಕ್ಕಬಂದಿಯನ್ನು ವಕೀಲರಿಗೆ ಹೇಳಿಲ್ಲ. ಸದರಿ ವ್ಯವಹಾರ ನನ್ನ ಎದುರಿಗೆ ಆಗಿಲ್ಲ. ನನ್ನ ಎದುರಿಗೆ ರೂ.4,50,000/- ಕೊಡುವ ಅಥವಾ ತೆಗೆದುಕೊಳ್ಳುವ ವ್ಯವಹಾರ ಆಗಿಲ್ಲ. ನಾನು ಪ್ರತಿವಾದಿ ರೂ.4,50,000/- ತೆಗೆದುಕೊಳ್ಳುವುದ್ದನ್ನು ನಾನು ನೋಡಿಲ್ಲ. ನಿಪಿ-1 ಸಂಚಗಾರ ಪತ್ರವನ್ನು ಬರೆಯಿಸಲು ನಾಗರಾಜ ಒಬ್ಬನೇ ಬಂದಿದ್ದ. ಆತನ ಜೊತೆ ಬೇರೆ ಯಾರು ಬಂದಿರಲಿಲ್ಲ. ತಂಟೇದ ಆಸ್ತಿಗೆ ಸಂಬಂಧಪಟ್ಟಂತೆ ಈ ಮೊದಲು ಬೇರೆ ಯಾವುದಾದರು ಕಾಗದ ಪತ್ರ ಬರೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಬ್ ರಜಿಸ್ಟರ ಕಚೇರಿಯಲ್ಲಿ ಈ ರೀತಿ ಪತ್ರ ನೊಂದಣಿ ಆದಗ EC ಯಲ್ಲಿ ಬರೆಯಿಸಿಕೊಂಡವರ ಮತ್ತು ಬರೆಯಿಸಿಕೊಟ್ಟವರ ಇಬ್ಬರು ಹೆಸರು ನಮೂದು ಆಗುತ್ತದೆ ಎಂದರೆ ನಿಜ. ನಿಡಿ-1 ಪತ್ರವನ್ನು ನಾನೇ ಬರೆದಿದ್ದೆ. ನಿಡಿ-1 ಕಾಗದ ನೊಂದಣಿ ಆದ ನಂತರ ನಿಪಿ-1 ಕಾಗದ ಮಾಡಲು ಬರುವುದಿಲ್ಲ ಎಂದು ನಾನು ಪ್ರತಿವಾದಿಗೆ ಹೇಳಿಲ್ಲ. ನಿಪಿ-2 ಮತ್ತು 3 ಉತಾರಗಳ ಆಧಾರದ ಮೇಲೆ ಜಮೀನಗಳು ಖರೀದಿ ಆಗುತ್ತವೆ ಅವುಗಳಿಗೆ 11E ನಕಾಶೆ ಬೇಕಾಗಿಲ್ಲ. ಸಾಮಾನ್ಯವಾಗಿ ಈ ರೀತಿ ಪತ್ರ ವ್ಯವಹಾರ ಆಗುವಾಗ ಬರೆಯಿಸಿಕೊಳ್ಳುವವರ ಕಡೆಯಿಂದ ಇಬ್ಬರು ಸಾಕ್ಷಿದಾರರು ಹಾಗೂ ಬರೆಸಿಕೊಟ್ಟವರ ಕಡೆಯಿಂದ ಇಬ್ಬರು ಸಾಕ್ಷಿದಾರರು ಬಂದಿರುತ್ತಾರೆ ಎಂದರೆ ನಿಜ. ಆ ದಿನ ನಿಪಿ-1 ಸಂಚಗಾರ ಪತ್ರ ಮಾಡುವ ಬದಲಾಗಿ ಖರೀದಿ ಪತ್ರವೇ ಮಾಡಿದ್ದರೆ ಅದು ನೊಂದಣಿ ಆಗುತ್ತಿತ್ತು, 11E ನಕಾಶೆ ಬೇಕಾಗಿರಲಿಲ್ಲ ಎಂದರೆ ನಿಜ. ಹಣದ ಭದ್ರತೆಗಾಗಿ ಕೆಲವೂಮ್ಮೆ ಸಂಚಗಾರ ಪತ್ರ ಬರೆದು ಕೊಡುತ್ತಾರೆ ಎಂದರೆ ನಿಜ. 2014 ರಲ್ಲಿ ಹಣದ ಭದ್ರತೆಗಾಗಿ ನಾನೇ ಬರೆದುಕೊಟ್ಟ ಸಂಚಗಾರ ಪತ್ರವನ್ನು ಮುಚ್ಚಿಟ್ಟು ನಾನು 2016 ರಲ್ಲಿ ಮತ್ತೊಂದು ಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ. 2014 ಮತ್ತು 2016 ರಲ್ಲಿ ಮಾಡಿದ ಕಾಗದ ಪತ್ರಗಳು ತೋರಿಕೆಗಾಗಿ ಹಣದ ಭದ್ರತೆಗಾಗಿ ಮಾಡಿದಂತಹ ಪತ್ರಗಳು ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.

ಅಸಲು ದಾವೆ ನಂಃ 294/2017 ಪಿ.ಡಬ್ಲ್ಯೂಃ1- ಚಂದ್ರಗೌಡ ಪರ್ವತಗೌಡ

<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05-03-2024 ರಂದು ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ VSB ವಕೀಲರಿಂದಃ</u>**

**1.** ನಾನು 9 ನೇ ತರಗತಿಯವರಿಗೆ ಓದಿದ್ದೇನೆ. ನನ್ನದು ಬಂಗಾರದ ಅಂಗಡಿ ಇದೆ. ನನ್ನದು ಚಂದನ್ Jewelers ಎಂದು ಅಂಗಡಿ ಇದೆ. ಸುಮಾರು 18 ವರ್ಷಗಳಿಂದ ಬಂಗಾರದ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಅಣ್ಣನದ್ದು ಬಟ್ಟೆ ಅಂಗಡಿ ಸಹ ಇರುತ್ತದೆ. ಈ ಬಟ್ಟೆ ಮತ್ತು ಬಂಗಾರ ವ್ಯಾಪಾರ ಜೊತೆ ಮತ್ತೆ ಬೇರ ಯಾವುದೇ ವ್ಯಾಪಾರ ಮಾಡುವುದಿಲ್ಲ. ಕೈಗಡ ಸಾಲ ಕೊಡವುದು ಮತ್ತು ತೆಗೆದುಕೊಳ್ಳು ವ್ಯವಹಾರ ಮಾಡುವುದಿಲ್ಲ. ನಮ್ಮ ಬಂಗಾರ ಅಂಗಡಿಯ ಆಡಿಟ್ ಮಾಡಿಸಿದ ಬಗ್ಗೆ ದಾಖಲೆ ಇರುತ್ತದೆ. ನಾನು ಪ್ರತಿವರ್ಷ ಆದಾಯ ತರಿಗೆ ಪಾವತಿಸುತ್ತೇನೆ. ನಾನು ಆದಾಯ ತರಿಗೆ ಪಾವತಿಯಲ್ಲಿ ಪ್ರತಿವಾದಿ ನಾಗರಾಜನಿಗೆ ರೂ.4,50,000/-ಗಳನ್ನು ನೀಡಿದ ಬಗ್ಗೆ ತೋರಿಸಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರು ಮಾಡುತ್ತೇನೆ. ಈ ಕೇಸ್ ಬಗ್ಗೆ ಮಾಹಿತಿ ಇರುತ್ತದೆ. ದಿಃ 16/06/2016 ರಂದು ವಚನ ಪತ್ರ ಪ್ರತಿವಾದಿ ಬರೆದು ಕೊಟ್ಟಿರುತ್ತಾನೆ. ಈ ವ್ಯವಹಾರದ ಮುಂಚೆ ಯಾವುದಾದರು ತಂಟೆ ಆಸ್ತಿಗೆ ಸಂಬಂಧಪಟ್ಟಂತೆ ವ್ಯವಹಾರ ಆದ ಬಗ್ಗೆ ಈಗ ನನಗೆ ನೆನಪು ಇಲ್ಲ. ಪ್ರತಿವಾದಿ 2014 ರಲ್ಲಿ ನನ್ನ ಕಡೆಯಿಂದ ಯಾವುದೇ ಕೈಗಡ ಸಾಲ ತೆಗೆದುಕೊಂಡಿಲ್ಲ. ನಾನು ಈಗ ಒಂದು ದಾಖಲೆ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಒಪ್ಪಿ ದ್ದರಿಂದ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.

2. ಸರ್ವೇ ನಂ 91/7 ಎ ಹಾಗೂ 91/7 ಬಿ/1 ಇವುಗಳು ಪ್ರತಿಯೊಂದು 8 ಗುಂಟೆಯ ಪ್ಲಾಟ್ ಎಂದರೆ ನಿಜ. ಈ ಎರಡು ಜಮೀನಿಗೆ ಪ್ರತಿವಾದಿ ಸಂಪೂರ್ಣ ಮಾಲಿಕ ಹಾಗೂ ಕಬ್ಜೆದಾರ ಇರುತ್ತಾನೆ ಎಂದರೆ ನಿಜ. ಪ್ರತಿವಾದಿಯು ಕಾಳುಕಡಿಯ ವ್ಯಾಪರಸ್ಥರು ಎಂದರೆ ನಿಜ. ಪ್ರತಿವಾದಿಯು ನರೇಗಲ್ ನಲ್ಲಿ ತಂಟೆ ಜಾಗೆದಲ್ಲಿ ಒಂದು ಗೋಡೌನ್ ನಿರ್ಮಾಣ ಮಾಡಿ ಅಲ್ಲಿ ಪುಟಾಣಿ ಮಿಲ್ ಹಾಕುವ ಯೋಜನೆ ಇಟ್ಟುಕೊಂಡು ಗೋಡೌನ್ ನಿರ್ಮಾಣ ಮಾಡಿದ್ದಾರೆಂದರೆ ಸಾಕ್ಷಿಯು ನನಗೆ ಜಾಗೆ ಬರೆದು ಕೊಟ್ಟಾಗ ತಗಡಿನ ಶೆಡ್ಡ ಇರಲಿಲ್ಲ ಎಂದು ಹೇಳುತ್ತಾರೆ. 2014 ರಲ್ಲಿ ಪ್ರತಿವಾದಿಯು 50 ಲಕ್ಷ ರೂಪಾಯಿ ಹೂಡಿಕೆ ಮಾಡಿ ಅಲ್ಲಿ ಬೃಹತವಾದ ಗೋಡೌನ್ ನಿರ್ಮಾಣ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ದಾವಾ ಜಮೀನು ಸುತ್ತಲು ಕಂಪೌಂಡ ನಿರ್ಮಾಣ ಮಾಡಿ ಅದರ ಒಳಗಡೆ ಗೋಡೌನ್ ಕಟ್ಟಿದಾರೆಂದರೆ ಸರಿಯಲ್ಲ. 2014 ರಲ್ಲಿ ಕಟ್ಟಡ ಸಹಿತ ಅದರ ಮೌಲ್ಯ ಸುಮಾರು ರೂ.80 ಲಕ್ಷ ಆಗುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ತನ್ನ ವ್ಯಾಪಾರದಿಂದ ಬಂದಂತಹ ಎಲ್ಲಾ ಹಣವನ್ನು ದಾವಾ ಜಮೀನಿನಲ್ಲಿ ಪುಟಾಣಿ ಮಿಲ್ ಮಾಡಲು ನಿಯೋಜಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಣದ ಅಡಚಣೆ

ಬಿದ್ದಿದರಿಂದ ಆತನ ನನ್ನ ಹತ್ತಿರ ರೂ.2,00,000/- ಕೈಗಡ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ರೂ.2,00,000/- ಕೈಗಡ ಕೊಡಲು ಒಪ್ಪಿ , ಆತನಿಗೆ ನಾನು ಹೇಳಿದ ಹಾಗೇ ಪತ್ರಬರೆದುಕೊಡಲು ಷರತ್ತು ವಿಧಿಸಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಿಡಿ-1 ರಂತೆ ಪತ್ರ ಬರೆಯಿಸಿಕೊಂಡಿದ್ದೆ ಎಂದರೆ ಸಾಕ್ಷಿ ನಿಡಿ-1 ರಂತೆ ಸಂಚಗಾರ ಪತ್ರ ಮಾಡಿಕೊಂಡಿದ್ದು ನಿಜ. ಆದರೆ ಯಾವುದೇ ಕೈಗಡ ಹಣ ಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. ನಿಡಿ-1 ವಚನ ಪತ್ರವನ್ನು ಏಕೆ ಬರೆಯಿಸಿಕೊಂಡಿರಿ ಎಂಬ ಪ್ರಶ್ನೆಗೆ ಸಾಕ್ಷಿ ಅಲ್ಲಿ ತಗಡಿನ ಶೆಡ್ಡ್ ಹಾಕಿದ್ದೇನೆ ಆದ್ದರಿಂದ ಹೆಚ್ಚಿಗೆ ಹಣ ಕೊಡಬೇಕೆಂದು ಹೇಳಿ ಆ ತಗಡಿನ ಶೆಡ್ಡ ಸಮೇತ ನನಗೆ ವ್ಯಾಪರಕ್ಕೆ ಕೊಟ್ಟರು ಎಂದು ಹೇಳುತ್ತಾರೆ. ತಗಡಿನ ಶೆಡ್ಡ ಎಂದರೆ ತಾತ್ಕಾಲಿಕವಾಗಿ ಗೋಡೆ ನಿರ್ಮಾಣ ಮಾಡಿ ಮುಂದೆ ಕಿತ್ತಿಕೊಳ್ಳುವಂತಹ ಒಂದು ಕಟ್ಟಡ ಎಂದರೆ ನಿಜ. ನಿಡಿ -1 ಸಂಚಗಾರ ಪತ್ರ ಹಣದ ಭದ್ರತೆಗಾಗಿ ಮಾಡಿಕೊಂಡ ಪತ್ರ ಎಂದರೆ ಸರಿಯಲ್ಲ. ನಿಡಿ-1 ಪತ್ರ ಆದ ನಂತರ ಪ್ರತಿವಾದಿ ನನಗೆ ಪ್ರತಿ ತಿಂಗಳು 3% ನಂತೆ ಬಡ್ಡಿ ತುಂಬುತ್ತಾ ಬಂದಿದ್ದಾನೆ ಎಂದರೆ ಸರಿಯಲ್ಲ. ಮುಂದೆ ಪ್ರತಿವಾದಿಗೆ ಬಡ್ಡಿ ಕೊಡಲು ಆಗದೇ ಇರುವ ಕಾರಣಕ್ಕಾಗಿ ಪ್ರತಿವಾದಿಗೆ ನಾನು ಬಡ್ಡಿ ಕೊಡಲೇಬೇಕು ಇಲ್ಲವಾದಲ್ಲಿ ಹೆಚ್ಚಿ ಗೆ ಹಣಕ್ಕೆ ಮತ್ತೊಂದು ಪತ್ರ ಮಾಡಿಕೊಡಬೇಕೆಂದು ಪಿಡಿಸಿದ್ದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಕಡೆಯಿಂದ 2016 ರಲ್ಲಿ ಅವನಿಗೆ ಒತ್ತಡ ಹೇರಿ ಹೆದರಿಕೆ ಹಾಕಿ ಮತ್ತೊಂದು ಪತ್ರ ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಕಾಗದಗಳು ಹಣದ ಭದ್ರತೆಗಾಗಿ ಬರೆಯಿಸಿಕೊಂಡಂತಹ ಕಾಗದಗಳು ಎಂದರೆ ಸರಿಯಲ್ಲ. 2014 ರಲ್ಲಿ ಆದಂತಹ ವ್ಯಾಪಾರ ಬಗ್ಗೆ ನನ್ನ ವಾದಪತ್ರದಲ್ಲಿ ಏಕೆ ಮುಚ್ಚಿ ಇಟ್ಟಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿ ಹೊಸಕಾಗದ ಮಾಡಿಕೊಟ್ಟಿದರಿಂದ ಆ ಬಗ್ಗೆ ಬರೆಯಿಸಿಲ್ಲ ಎಂದು ಹೇಳುತ್ತಾರೆ.

3. 2014 ರಲ್ಲಿ ಜಮೀನುಗಳ ವ್ಯಾಪಾರದ ಸಲುವಾಗಿ ಗದಗಿನ ತಂಗೋಳಿ ಇವರ ಕಾಲಕಾಲೇಶ್ವರ ಟ್ರೈಡಿಂಗ್ ಕಂಪನಿಯಲ್ಲಿ ವ್ಯವಹಾರ ಆಗಿತ್ತು. ಯಾವ ತಾರೀಕಿನಂದು ವ್ಯವಹಾರ ಆಗಿತ್ತು ಎಂದು ನನಗೆ ನೆನಪು ಇಲ್ಲ. ಸದರಿ ವ್ಯವಹಾರದಲ್ಲಿ ನಾನು, ನಾಗರಾಜ ಮತ್ತು ಕಳಕಪ್ಪ ತಂಗೋಳಿ ಭಾಗವಹಿಸಿದ್ದೇವು. 2014 ರಲ್ಲಿ ಎಷ್ಟು ಹಣಕ್ಕೆ ವ್ಯವಹಾರ ಆಗಿತ್ತು. ಪ್ರತಿವಾದಿ ಎಷ್ಟು ಬೇಡಿದ್ದರು ಎಂದು ಈಗ ನನಗೆ ನೆನಪು ಇಲ್ಲ. ನಿಡಿ-1 ರ ದಾಖಲೆ ಬರೆಯವಾಗ ಸಾಕ್ಷಿದಾರರು ಯಾರು ಯಾರು ಇದ್ದರು ಎಂದು ನನಗೆ ನೆನಪು ಇಲ್ಲ.

4. 2016 ರ ಸಂಚಗಾರ ಪತ್ರದ ಗದಗಿನ ನಮ್ಮ ಬಂಗಾರದ ಅಂಗಡಿಯಲ್ಲಿ ಆಗಿದೆ. ಸದರಿ ವ್ಯವಹಾರದ ಸಲುವಾಗಿ ನಾನು , ಪ್ರತಿವಾದಿ ಮತ್ತು ಕಳಕಪ್ಪ ತಂಗೋಳಿ ಭಾಗವಹಿಸಿದ್ದೇವು. ಅಲ್ಲಿ ಶೆಡ್ಡ ಹಾಕಿದ್ದೇನೆ, ಹೆಚ್ಚಿ ಗೆ ಹಣ ಕೊಡಬೇಕೆಂದು ಹೇಳಿದ್ದರು . ಸರಿ ಎಂದು ನಾನು ಒಪ್ಪಿ ದ್ದೆ. ಸದರಿ ವ್ಯವಹಾರದಲ್ಲಿ ಪ್ರತಿವಾದಿ 7-8 ಲಕ್ಷ ಹಣ ಕೇಳಿದ್ದರು, ನಾನು ರೂ. 4,50,000/- ಕೇಳಿದೆ. ನಂತರ ಅವರು ರೂ.5,00,000/- ಒಪ್ಪಿ ಕೊಂಡು ವ್ಯವಹಾರ ಮುಗಿಸಿದ್ದೇವು. ನಾನು ಮತ್ತು ನಾಗರಾಜ ಮಾತುಕತೆ ಮಾಡಿ ವ್ಯವಹಾರ ಮುಗಿಸಿದ್ದೇವು. ಕಳಕಪ್ಪ ಇದ್ದರು. ಸಬ್ ರೆಜಿಸ್ಟರ ಕಚೇರಿಯಲ್ಲಿ ರೂ.2,50,000/- ಹಾಗೂ ಈ ಮೊದಲು

2014 ರಲ್ಲಿ ಕೊಟ್ಟಂತಹ ರೂ.2,00,000/- ಸೇರಿಸಿ ಒಟ್ಟು ರೂ.4,50,000/- ಹಣ ಕೊಟ್ಟೆನ್ನು. ನಾನು ನಗದು ಹಣ ಕೊಟ್ಟಿದ್ದೇನೆ. ಎರಡು ಕಾಗದ ಪತ್ರ ಆಗುವಾಗ ತಂಗೋಳಿಯವರು ಬರಲಿಲ್ಲ . ನಿಪಿ-1 ರ ಕಾಗದ ಬರೆಯವಾಗ ಕೃಷ್ಣ ರಂಗ್ರಜಿ ಹಾಗೂ ಮತ್ತೊಬ್ಬರು ಇದ್ದರು. ಅವರು ಈಗ ತೀರಿಕೊಂಡಿದ್ದಾರೆ. ಅವರ ಹೆಸರು ನನಗೆ ನೆನಪಿಲ್ಲ. ಜಕ್ಕಲಿ ಗ್ರಾಮದವರು ಮತ್ತು ನರೇಗಲ್ ಗ್ರಾಮದವರು ಆ ಕಾಗದ ಪತ್ರ ಆಗುವಾಗ ಯಾರು ಇರಲಿಲ್ಲ. 2016 ರಲ್ಲಿ ಆದ ಕಾಗದ ಪತ್ರದಲ್ಲಿ ತಗಡಿನ ಗೋಡೌನ ಎಂದು ಬರೆಯಿಸಿರುತ್ತೆವೆ. ನಾನು ಹೇಳುವ ಹಾಗೇ ರೂ.5,00,000/-ಗಳಿಗೆ ವ್ಯವಹಾರ ಆಗಿದೆ, ನಾನು ರೂ.4,50,000/- ಹಣ ಸಂಚಗಾರ ಎಂದು ಕೊಟ್ಟಿದ್ದೇನೆ ಹಾಗೂ ಅಲ್ಲಿ ಪ್ರತಿವಾದಿ ದಾವಾ ಆಸ್ತಿ ಮಾರಾಟ ಮಾಡಲು ನನಗೆ ಪತ್ರ ಬರೆದುಕೊಟ್ಟ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ಹಣ ನೀಡಿದ ಬಗ್ಗೆ ಭದ್ರತೆಗಾಗಿ ನೀಡಿದ ವಿನಃಹ ಸಂಚಗಾರ ಪತ್ರ ಅಲ್ಲ ಎಂದರೆ ಸರಿಯಲ್ಲ.

5. 2017 ರಲ್ಲಿ ಪ್ರತಿವಾದಿ ಮತ್ತು ಪ್ರತಿವಾದಿ ತಂದೆ ನನಗೆ ಭೇಟಿ ಆಗಿ ರೂ.2,00,000/- ಹಾಗೂ ಅದಕ್ಕೆ ಸಲ್ಲುವ ಎಲ್ಲಾ ಬಡ್ಡಿಯನ್ನು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯೂ ನನಗೆ ಎರಡು ಪತ್ರಗಳನ್ನು ಕೊಡಿ ಎಂದು ಕೇಳಿದಾಗ ನಾನು ಆತನಿಗೆ ಬ್ಯಾಂಕ ಲಾಕರನಲ್ಲಿ ಇಟ್ಟಿದ್ದೇನೆ, ನಂತರ ತೆಗೆಯಿಸಿ ಕೊಡುತ್ತೇನೆ ಎಂದು ಹೇಳಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಮುಂದೆ ಆ ಜಮೀನನ್ನು ಮಾರಾಟ ಮಾಡುವ ಸಲುವಾಗಿ ಪತ್ರಗಳನ್ನು ತೆಗೆಯಿಸಲಾಗಿ ಅದರ ಮೇಲೆ ಎನಕಮ್ ಬರೇನ್ಸ ಇರುವ ಬಗ್ಗೆ ಗೊತ್ತಾಗಿ ನನ್ನ ಹತ್ತಿರ ಬಂದು ಅದನ್ನು ತೆಗೆಯಿಸಿ ಕೊಡಿವೆಂದು ಕೇಳಿದಾಗ ನಾನು ಪ್ರತಿವಾದಿಗೆ ನಿನ್ನದು ಒಟ್ಟು ರೂ.24,00,000/- ಸಾಲ ಇದೆ ಎಂದು ಹೇಳಿ ಬೆದರಿಸಿ ಕಳುಹಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ 2019 ತನಕ ಬೆಂಗಳೂರಿನಲ್ಲಿ ತನ್ನ ಉಪಜೀವನಕ್ಕಾಗಿ ಇದ್ದ ಎಂದರೆ ಸರಿಯಲ್ಲ. ಪ್ರತಿವಾದಿ ಬೆಂಗಳೂರಿನಲ್ಲಿ ಇದ್ದಂತಹ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ನಾನು ಮುಗಿದು ಹೋದ ವ್ಯವಹಾರದ ಪತ್ರಗಳನ್ನು ಇಟ್ಟುಕೊಂಡು ಪ್ರತಿವಾದಿಯ ವಿರುದ್ದ ಈ ಒಂದು ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ತಂಟೇದ ಆಸ್ತಿ ಗದಗ-ನರೇಗಲ್ ಮುಖ್ಯ ರಸ್ತೆ ಹೊಂದಿಕೊಂಡು ಇದೆ ಎಂದರೆ ನಿಜ. ತಂಟೇದ ಆಸ್ತಿಗಳಲ್ಲಿ ಇದ್ದಂತಹ ಗೋಡೌನ ಸಮೇತ ಆ ಜಮೀನು ಒಂದು ಕೋಟಿ ರೂಪಾಯಿ ಬೆಲೆಬಾಳುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ನರೇಗಲ್ ಗ್ರಾಮಕ್ಕೆ ಹೊಂದಿಕೊಂಡು ಇರುವಂತಹ ಜಮೀನು ಎಂದರೆ ಸರಿಯಲ್ಲ. ನಾನು ತೋರಿಕೆಗಾಗಿ ಬರೆದುಕೊಟ್ಟಂತಹ ಪತ್ರವನ್ನು ದುರುಪಯೋಗ ಪಡಿಸಿಕೊಂಡು ಪ್ರತಿವಾದಿ ವಿರುದ್ದ ಈ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಾನು ಕೊಟ್ಟಂತಹ ರೂ.2,00,000/- ಬಡ್ಡಿ ಸಮೇತ ಮರುಪಾವತಿ ಮಾಡಿದ್ದಾನೆ, ಆತನಿಂದ ಬರಬೇಕಾದ ಯಾವುದೇ ಹಣ ಬಾಕಿ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರ ಪಡೆಯಲು ಅರ್ಹನಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನರೇಗಲ್ ನಲ್ಲಿ ದಾವಾ ಆಸ್ತಿಯಲ್ಲಿ ಇರುವಂತಹ ಗೋಡೌನಲ್ಲಿ ಕಾಳುಕಡಿಗಳನ್ನು ಇಡಲು ಸರಕಾರದವರು ಆ ಗೋಡೌನವನ್ನು ಬಾಡಿಗೆ ಪಡಿದಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿ ತಿಂಗಳು ಸರಕಾರದವರು ಆ ಗೋಡೌನನಿಗೆ ರೂ.40,000/- ಬಾಡಿಗೆ

ಕೊಡುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ತಂಟೆದ ಆಸ್ತಿ ಹೊರತುಪಡಿಸಿ ಪ್ರತಿವಾದಿಗೆ ಬೇರ ಯಾವುದೇ ಆಸ್ತಿ ಜೀವನೋಪಾಯಕ್ಕಾಗಿ ಇಲ್ಲ ಎಂದರೆ ಆತನಿಗೆ ಜಕ್ಕಲಿಯಲ್ಲಿ ಆಸ್ತಿ ಇದೆ ಎಂದು ಹೇಳುತ್ತಾರೆ. ಜಕ್ಕಲಿಯಲ್ಲಿ ಆಸ್ತಿಗಳು ಇರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಲು ಆಗುವುದಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.